ಕರ್ನಾಟಕ ಸರ್ಕಾರ

ನಿರ್ದೇಶಕರ ಕಚೇರಿ
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-1

ಸಂಖ್ಯೆ: ಡಿಟಿಇ 493 ಮಾಹಕಾ 2016

ದಿನಾಂಕ: 24-01-2018

## ಸುತ್ತೋಲೆ

**ವಿಷಯ :** ಮಾಹಿತಿ ಹಕ್ಕು ಅಧಿನಿಯಮ 2005ರ ಅನುಸಾರ 2016-17 ಸಾಲಿಗೆ ಸೆಕ್ಷನ್ 4(1)ಎ & 4(1)ಬಿ ಸೂಚಿಪಟ್ಟಿ ಯನ್ನು ಕಾಲೋಚಿತಗೊಳಿಸಿ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವ ಬಗ್ಗೆ.

**ಉಲ್ಲೇಖ :** 1. ಸರ್ಕಾರದ ಪತ್ರ ಸಂ. ಸಿಆಸುಇ 223 ಆರ್‌ಐಟಿ 2017 ದಿ: 29-12-2017

2. ಸರ್ಕಾರದ ಪತ್ರ ಸಂಖ್ಯೆ ಇಡಿ 135 ವಿವಿಧ 2017 ದಿನಾಂಕ 18-01-2018.

*****

ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 4(1)ಎ ಮತ್ತು 4(1)ಬಿಗಳ ಅನುಷ್ಠಾನದ ಪ್ರಗತಿಯನ್ನು ವಿಮರ್ಶಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಜನಸ್ಪಂದನ) ರವರ ಕೊಠಡಿಯಲ್ಲಿ ದಿನಾಂಕ 22-01-2018ರಂದು ಸಭೆಯನ್ನು ಕರೆಯಲಾಗಿತ್ತು. ಸದರಿ ಸಭೆಯಲ್ಲಿ ಎಲ್ಲಾ ಇಲಾಖೆಗಳು ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 4(1)ಎ ಮತ್ತು 4(1)ಬಿ ಗಳನ್ನು ಕಾಲೋಚಿತಗೊಳಿಸಿ ದಿನಾಂಕ: 31-1-2018 ರೊಳಗೆ ತಮ್ಮ ಸಂಸ್ಥೆಯ ಜಾಲತಾಣದಲ್ಲಿ ಪ್ರಕಟಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಸೂಚಿಸಿರುತ್ತಾರೆ.

ಆದ್ದರಿಂದ ಈ ಸಂಬಂಧ, ಸರ್ಕಾರಕ್ಕೆ ತುರ್ತಾಗಿ ಮಾಹಿತಿ ಒದಗಿಸಬೇಕಾಗಿರುವುದರಿಂದ, ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳು ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಿನ್ಸಿಪಾಲರು ಈ ಬಗ್ಗೆ ವೈಯಕ್ತಿಕ ಗಮನ ಹರಿಸಿ, ಅತೀ ತುರ್ತಾಗಿ ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 4(1)ಎ ಮತ್ತು 4(1)ಬಿ ಗಳಂತೆ ಮಾಹಿತಿಯನ್ನು ಕಾಲೋಚಿತಗೊಳಿಸಿ ತಮ್ಮ ಸಂಸ್ಥೆಯ ಜಾಲತಾಣದಲ್ಲಿ ಪ್ರಕಟಿಸುವಂತೆ ಹಾಗೂ ಈ ಬಗ್ಗೆ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವಂತೆ ಸೂಚಿಸಿದೆ.

ನಿರ್ದೇಶಕರು

ಇವರಿಗೆ :

1. ಪ್ರಿನ್ಸಿಪಾಲರು, ಸರ್ಕಾರಿ /ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು
2. ಪ್ರಿನ್ಸಿಪಾಲರು, ಸರ್ಕಾರಿ /ಅನುದಾನಿತ ಪಾಲಿಟೆಕ್ನಿಕ್‌ಗಳು
3. ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು
4. ಇ-ಆಡಳಿತ ವಿಭಾಗಕ್ಕೆ, ವೆಬ್‌ಸೈಟ್‌ನಲ್ಲಿ ಸುತ್ತೋಲೆಯನ್ನು ಪ್ರಚುರಪಡಿಸಲು ಕ್ರಮಕ್ಕಾಗಿ